RNU AIR DHARWAD

NOVEMBER 07, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೆಳಕಿನ ಹಬ್ಬ ದೀಪಾವಳಿಯ ಹೊಸ್ತಿಲಲ್ಲಿ, ಉತ್ತರ ಕರ್ನಾಟಕ ಭಾಗದ, ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದಲ್ಲಿ, ಇಂದು ನೀರು ತುಂಬುವ ಹಬ್ಬ ಹಾಗೂ ಧನ ತ್ರಯೋದಶಿ – ಧನ್‌ತೇರಸ್ ಆಚರಿಸಲಾಗುತ್ತಿದೆ. ನಾಡಿನಾದ್ಯಂತ ಭಗವಾನ್ ಕುಬೇರ ಹಾಗೂ ಧನ್ವಂತರಿ ದೇವಿಯನ್ನು, ಶ್ರದ್ಧಾಭಕ್ತಿಯಿಂದ ಪೂಜಿಸಲಾಗುತ್ತಿದೆ. ಬಂಗಾರ ಹಾಗೂ ಬೆಳ್ಳಿಯ ಖರೀದಿ ಜೊತೆಗೆ, ಅದೃಷ್ಟವನ್ನು ಮನೆಗೆ ಆಹ್ವಾನಿಸುವ ನಂಬಿಕೆಯೊಂದಿಗೆ, ವಿಶಿಷ್ಟ ಆಚರಣೆ ಧನ್‌ತೇರಸ್, ಶ್ರದ್ಧಾ–ಭಕ್ತಿ ಹಾಗೂ ಸಂಭ್ರಮದಿಂದ ಜರುಗುತ್ತಿದೆ. ಭಾನುವಾರ ನರಕ ಚತುರ್ದಶಿ. ಮಂಗಳವಾರ ಬಲಿ ಪಾಡ್ಯಮಿ.

<><><>

ಮಲೈ ಮಹದೇಶ್ವರ ಬೆಟ್ಟದಲ್ಲಿ, ಈ ತಿಂಗಳ 11ನೇ ತಾರೀಖು ನಡೆಯಲಿರುವ, ದೀಪಾವಳಿ ಜಾತ್ರೆಯ ಹಿನ್ನೆಲೆಯಲ್ಲಿ, ರಾತ್ರಿ ವೇಳೆಯ ಪಾದಯಾತ್ರೆಯನ್ನು ನಿರ್ಬಂಧಿಸಿ, ಜಿಲ್ಲಾಧಿಕಾರಿ ಶ್ರೀ ರೂಪಾ ಆದೇಶಿಸಿದ್ದಾರೆ. ವನ್ಯಜೀವಿ ಹಾಗೂ ಭಕ್ತಾದಿಗಳ, ಸುರಕ್ಷತೆಯ ದೃಷ್ಟಿಯಿಂದ, ಈ ಕ್ರಮ ಕೈಗೊಳ್ಳಲಾಗಿದೆ ಎಂದು, ಅವರು ತಿಳಿಸಿದ್ದಾರೆ.

<><><>

ನೊಬೆಲ್ ಪ್ರಶಸ್ತಿ ಪುರಸ್ಕೃತ, ಭಾರತೀಯ ವಿಜ್ಞಾನಿ, ಸರ್ ಸಿ.ವಿ. ರಾಮನ್ ಅವರ ಜನ್ಮದಿನವಿಂದು. ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ, 1888ರ, ನವೆಂಬರ್ 7 ರಂದು, ಜನಿಸಿದ ಸಿ.ವಿ. ರಾಮನ್, ಬೆಳಕಿನ ಚದುರುವಿಕೆಯ ಸಂಶೋಧನೆಗೆ, 1930 ರಲ್ಲಿ ಭೌತಶಾಸ್ತ್ರದ ನೊಬೆಲ್ ಪಡೆದರು. 1970ರಲ್ಲಿ ನಿಧನರಾದ ರಾಮನ್ ಅವರು, ಅತ್ಯುನ್ನತ ಪ್ರಶಸ್ತಿಗೆ ಭಾಜನರಾದ, ಮೊದಲ ಏಷ್ಯಾ ಖಂಡದ ವಿಜ್ಞಾನಿ ಎಂಬ, ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

<><><>

ಪ್ರತಿ ವರ್ಷ ನವೆಂಬರ್ 7ನೇ ತಾರೀಖು, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆ. ಮಾರಣಾಂತಿಕ ಕಾಯಿಲೆಯಾದ, ಕ್ಯಾನ್ಸರ್ ಪತ್ತೆ, ತಡೆಗಟ್ಟುವಿಕೆ ಮತ್ತು ಸಕಾಲಿಕ ಚಿಕಿತ್ಸೆ, ಉಪಶಮನ ಆರೈಕೆ ಕುರಿತು, ಜನ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

<><><>

ಕೇಂದ್ರ ಲೋಕಸೇವಾ ಆಯೋಗ ನಡೆಸುವ, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ – ಎನ್.ಡಿ.ಎ. ಪರೀಕ್ಷೆಯ ಮಹಿಳಾ ವಿಭಾಗದಲ್ಲಿ, ಶಿವಮೊಗ್ಗ ತಾಲೂಕು, ತಿಮ್ಮಾಪೂರ ಗ್ರಾಮದ, ಶ್ರೇಯಾ ಎಸ್.ಗೌಡ ಇಡೀ ದೇಶಕ್ಕೆ ಪ್ರಥಮ ರ್ಯಾಂಕ್ ಪಡೆದಿದ್ದಾರೆ. ಪ್ರಸ್ತುತ ಮಂಗಳೂರಿನ, ಸುರತ್ಕಲ್ ಪ್ರಾದೇಶಿಕ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ, ಇಂಜಿನಿಯರಿಂಗ್ ವ್ಯಾಸಂಗ ನಿರತರಾಗಿದ್ದಾರೆ.

<><><>

2026–27ನೇ ಸಾಲಿನ, ಸಿ.ಬಿ.ಎಸ್.ಇ. 10 ಹಾಗೂ 12ನೇ ತರಗತಿಯ ವಾರ್ಷಿಕ ಪರೀಕ್ಷೆ ವೇಳಾಪಟ್ಟಿ ಪ್ರಕಟವಾಗಿದೆ. 2027ರ ಫೆಬ್ರವರಿ 16 ರಿಂದ, ಪರೀಕ್ಷೆಗಳು ಆರಂಭವಾಗಲಿವೆ. ಮಾರ್ಚ್ 9ಕ್ಕೆ 10ನೇ ತರಗತಿ ಹಾಗೂ ಏಪ್ರಿಲ್ 12ಕ್ಕೆ, 12ನೇ ತರಗತಿ ಪರೀಕ್ಷೆಗಳು ಮುಕ್ತಾಯವಾಗಲಿವೆ.

<><><>

ವಿಧಾನಮಂಡಲದ, ಚಳಿಗಾಲದ ಅಧಿವೇಶನ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ಡಿಸೆಂಬರ್ 2 ರಿಂದ, 11ನೇ ತಾರೀಖಿನ ವರೆಗೆ, ನಿಗದಿಯಾಗಿದೆ. ರಾಜ್ಯಪಾಲರಿಂದ ಅಧಿಕೃತ ಅಧಿಸೂಚನೆ ಪ್ರಕಟವಾಗಿದೆ. ಒಟ್ಟು 9 ದಿನಗಳ ಕಲಾಪವಿರಲಿದ್ದು, ಈ ಬಾರಿ ಶನಿವಾರವೂ ಅಧಿವೇಶನ ನಡೆಯಲಿದೆ. ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಹಿನ್ನೆಲೆ, ಮೊದಲು ನಿಗದಿಯಾಗಿದ್ದ ಅಧಿವೇಶನದ ದಿನಾಂಕ ಬದಲಿಸಿ, ಲೋಕಭವನ ಆದೇಶಿಸಿದೆ.

<><><>

ಪ್ರತಿ ಟನ್ ಕಬ್ಬಿಗೆ, ರಾಜ್ಯ ಸರ್ಕಾರದ ಸಾವಿರ ರೂಪಾಯಿ ಪ್ರೋತ್ಸಾಹ ಧನ ಸೇರಿ, ಒಟ್ಟು 5 ಸಾವಿರದ 500 ರೂಪಾಯಿ ನೀಡುವಂತೆ ಒತ್ತಾಯಿಸಿ, ಕಬ್ಬು ಬೆಳೆಗಾರರು ನಡೆಸುತ್ತಿದ್ದ ಹೋರಾಟ, ಲಾಭ ಹಂಚಿಕೆ ಸೂತ್ರದಡಿ ಅಂತ್ಯಗೊಂಡಿದ್ದು, ಬೆಳಗಾವಿ ಜಿಲ್ಲೆಯ ಬಹುತೇಕ ಸಕ್ಕರೆ ಕಾರ್ಖಾನೆಗಳಲ್ಲಿ, ಕಬ್ಬು ನುರಿಸುವ ಹಂಗಾಮು, ಆರಂಭವಾಗಿದೆ.

<><><>

ವಿಜಯನಗರ ಜಿಲ್ಲೆ, ಕೊಟ್ಟೂರು ತಾಲೂಕು, ಉಜ್ಜಿನಿ ಬಳಿಯ, ಮಂಗಾಪುರ ಗ್ರಾಮದಲ್ಲಿ, 'ವಿ.ಎಲ್. 400' ಹೆಸರಿನ, ವಿಶೇಷ ರಾಗಿ ಬೀಜ ತಳಿಯ ಕ್ಷೇತ್ರೋತ್ಸವವನ್ನು, ರಾಷ್ಟ್ರೀಯ ಬೀಜ ನಿಗಮ, ಆಯೋಜಿಸಿತ್ತು. ಉತ್ತರಾಖಂಡ ರಾಜ್ಯದ, ಅಲ್ಮೋರಾದ ಶ್ರೀ ವಿವೇಕಾನಂದ ಪರ್ವತೀಯ ಕೃಷಿ ಅನುಸಂಧಾನ ನಿರ್ದೇಶಕ, ಡಾಕ್ಟರ್ ಲಕ್ಷ್ಮೀಕಾಂತ, ಅತಿಥಿಯಾಗಿ ಪಾಲ್ಗೊಂಡಿದ್ದರು. ಮಂಗಾಪುರ ಗ್ರಾಮದ ರೈತ, ಫನಿಸಾಬ್ ಫಕೀರ್ ಸಾಬ್, ನೂತನ ತಳಿ ರಾಗಿ ಬೆಳೆದಿದ್ದು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರೈತ, ಫನಿಸಾಬ್ ಫಕೀರ್ ಸಾಬ್ ಧ್ವನಿ 37 ಸೆಕೆಂದುಗಳು

<><><>

ಕಿರಿಯರ ಒಲಿಂಪಿಕ್ಸ್‌ನ ಆವೃತ್ತಿಯೊಂದರಲ್ಲಿ, ಎರಡು ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನ್ನುವ ಹಿರಿಮೆಗೆ, ಕರ್ನಾಟಕದ ಈಜುಪಟು, ಧೀನಿಧಿ ದೇಸಿಂಘು ಪಾತ್ರರಾಗಿದ್ದಾರೆ. 16 ವರ್ಷದ ಈಜು ತಾರೆ, ಮೂರನೇ ಸ್ಥಾನ ಪಡೆದು, ಇತಿಹಾಸ ನಿರ್ಮಿಸಿದರು. ಸೆನಗಲ್‌ನ ಡಕಾರ್‌ನಲ್ಲಿ ನಿನ್ನೆ ನಡೆದ, 100 ಹಾಗೂ 200 ಮೀಟರ್ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ, ಧೀನಿಧಿ ಎರಡು ಕಂಚಿನ ಪದಕಗಳನ್ನು ಗೆದ್ದರು.

<><><>

ಸೆನೆಗಲ್ ನ ಡಕಾರ್ ದಲ್ಲಿ ಆಯೋಜಿತ, ಕಿರಿಯರ ಒಲಿಂಪಿಕ್ಸ್‌ನ, ಬ್ಯಾಡ್ಮಿಂಟನ್ ಮಹಿಳಾ ಸಿಂಗಲ್ಸ್‌ನಲ್ಲಿ, ಭಾರತದ ತನ್ವಿ ಪಾತ್ರಿ, ಬೆಳ್ಳಿ ಪದಕ ಗೆದ್ದಿದ್ದಾರೆ. ಚೀನಾದ ಝಾಂಗ್ ಯಿ ಕಿನ್ಸ್ ವಿರುದ್ಧ, 21–15, 13–21, 24–26 ಗೇಮ್‌ಗಳಲ್ಲಿ, ವಿರೋಚಿತವಾಗಿ ಹೋರಾಡಿ, ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

<><><>

ಉಡುಪಿಯಲ್ಲಿ ಇತ್ತೀಚೆಗೆ ನಡೆದ, ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿನ್ಮಯ ವಿದ್ಯಾಲಯದ ವಿದ್ಯಾರ್ಥಿನಿ, ಸಿಮ್ರಾ ನದಾಫ್, 8 ದಶಾಂಶ 5 ಅಂಕಗಳನ್ನು ಗಳಿಸಿ, ರಾಷ್ಟ್ರ ಮಟ್ಟದ ಚೆಸ್ ಟೂರ್ನಿಗೆ ಆಯ್ಕೆಯಾಗಿದ್ದಾರೆ.

<><><>

ವಿದ್ಯಾರ್ಥಿಗಳಿಗೆ ಗ್ರಾಮೀಣ ಬದುಕು, ಕೃಷಿ ಪದ್ಧತಿ, ನೇರವಾಗಿ ಪರಿಚಯಿಸುವ, 'ಗ್ರಾಮಾನುಭವ' ಕಾರ್ಯಕ್ರಮಕ್ಕೆ, ಮಂಡ್ಯ ನಗರದ, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಚಾಲನೆ ನೀಡಲಾಯಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.